ಅತ್ತಿಮಬ್ಬೆ ಮತ್ತು ಗುಂಡುಮಬ್ಬೆ ಇವರಿಬ್ಬರನ್ನು ದಲ್ಲಪನ ಏಕಮಾತ್ರ ಪುತ್ರನಾದ ನಾಗದೇವನಿಗೆ ಧಾರೆಯೆರೆದು ಕೊಡಬೇಕೆಂದು ನಿಶ್ಚಯವಾಯಿತು. ಮಲ್ಲಪ ತನ್ನ ಐಶ್ವರ್ಯವನ್ನೆಲ್ಲ ಈ ಮದುವೆಯ ನೆಪದಲ್ಲಿ ನೀರಿನಂತೆ ವ್ಯಯಮಾಡಿಬಿಡಬೇಕೆಂದು ನಿಶ್ಚಯಿಸಿದನು. ರಾಜಮಹಾರಾಜರ ಮದುವೆಯನ್ನೂ ಮೀರಿಸುವಂತೆ ಈ ಹೆಮ್ಮಕ್ಕಳ ಮದುವೆಗೆ ಆಡಂಬರಯುತವಾದ ಏರ್ಪಾಟುಗಳಾದವು. ಪುಂಗನೂರೆಲ್ಲ ವಿವಾಹವೇದಿಕೆಯಾಗಿ ಹೋಯಿತು ! ರಾಜಬೀದಿಗಳೆಲ್ಲ ತಳಿರು ತೋರಣಗಳಿಂದ ಸಿಂಗರ ಗೊಂಡು ಕಂಗೊಳಿಸಿದವು. ಕತ್ತುರಿ ಪುನಗು ಜವಾಜಿ ಅಂದು ಪುಂಗನೂರಿನಲ್ಲಿ ಧೂಳಲ್ಲಿ ಧೂಳಾಗಿ ಬೆರೆತು ಎಲ್ಲಿ ನೋಡಿದರು ರೋಮಾಂಚನಗೊಳ್ಳುವಂತೆ ಸೌರಭ ಪ್ರವಹಿಸಿತು. ಕಾಡುಮೇಡು ಒಂದನ್ನೂ ಬಿಡದೆ ಇದ್ದ ಹೂವನ್ನೆಲ್ಲ ತರಿದು ಈ ಮದುವೆ ಮಂಟಪವನ್ನು ಅಲಂಕರಿಸಿದರು. ಮಂಟಪದ ಹೊರವಲಯದಲ್ಲಿ ಎಷ್ಟೋ ವರ್ಷಗಳ ಹಿಂದೆ ಅಲ್ಲಲ್ಲೇ ಅಡಕೆ ಗಿಡಗಳನ್ನು ಬೆಳೆಸಿ ವೀಳೆಯದೆಲೆಯ ಬಳ್ಳಿಯನ್ನು ಹಬ್ಬಿಸಿದ್ದರು. ಮಾವಿನ ಸಸಿಗಳು ಮೈಯೆಲ್ಲ ಹೂವಾಗಿ ಕಾಮನ ಬೆಳ್‌ಗೊಡೆಯಂತೆ ಕಂಗೊಳಿಸಿದವು. ಮಂದಾರ ಲತೆ ಮಾವನ್ನು ತಬ್ಬಿ ದಾಂಪತ್ಯದ ಅನ್ಯೋನ್ಯತೆಯನ್ನು ಸಾರಿತು. ಮಂದಾರಕ್ಕೆ ಮರವು ಆಶ್ರಯವಾದರೆ, ಮಾವಿನ ಒರಟು ಕಾಂಡಕ್ಕೆ ಮಂದಾರದಿಂದ ಅಲಂಕಾರ ! ಬಗಣೆಯ ಬಿಳಿಲು ಅಲ್ಲಲ್ಲೆ ಇಳಿಬಿದ್ದು ಮೋಹಕವಾಗಿದ್ದವು. ಹೂಗಿಡಗಳನ್ನೂ ಸಾಲುಸಾಲಾಗಿ ಬೆಳಸಿ ಕಾಮನಬಿಲ್ಲಿನ ಮೋಹಕತೆ ಹಾಗು ವರ್ಣವಿನ್ಯಾಸ ಬರುವಂತೆ ಅರಳಿದ ಹೂಗಳಿರುವ ಗಿಡಗಳನ್ನು ಕಲಾಯುಕ್ತವಾಗಿ ಜೋಡಿಸಿದರು. ಅಲ್ಲಲ್ಲೇ ಜೇನ್ ಗೂಡುಗಳು ಮಕರಂದದ ಬೀಡುಗಳಾಗಿ ಕೋಟಿಕೋಟಿ ಜೇನ್‌ನೊಣಗಳು ಝೇಂಕಾರದಿಂದ ಜೋಲಾಡುವಾಗ ಮಕರಂದದ ಉಯ್ಯಾಲೆಯಲ್ಲಿ ರಾಗರಸ ಉಯ್ಯಾಲೆಯಾಡುತ್ತಿರುವಂತೆ ಭಾಸವಾಗುತ್ತಿತ್ತು ! ವಿವಾಹವೇದಿಕೆಯನ್ನು ನಿರ್ಮಿಸಲು ಕನ್ನಡನಾಡಿನ ಅಪೂರ್ವ ಶಿಲ್ಪಿಗಳೆಲ್ಲ ಆಗಮಿಸಿದ್ದರು. ಸಪ್ತವರ್ಣದ ಶಿಲೆಯನ್ನು ಕಮನಿಯವಾಗಿ ಕತ್ತರಿಸಿ ಅದರಲ್ಲಿ ಕನ್ನಡದ ಬಿನ್ನಾಣವನ್ನು

ತುಂಬಿ ಒನಪು ಒಯ್ಯಾರವನ್ನು ತಂದು ರಾಗರಸದಲ್ಲಿ ಒಪ್ಪಹಾಕಿ ಜೋಡಿಸಿದಾಗ ಕಾಮನಬಿಲ್ಲನ್ನೇ ಕಿತ್ತು ಅಡಿಮೇಲಾಗಿಟ್ಟಂತೆ ರಾರಾಜಿಸಿತು !

ಶುಭಲಗ್ನದಲ್ಲಿ ವಿವಾಹಮಹೋತ್ಸವವು ನೆರವೇರಿತು. ಕೈಲಾಸಗಿರಿ, ಪಾವಾಪುರಿ, ಚಂಪಾಪುರಿ, ಸಮ್ಮೇದ ಶಿಖರಿ ಹಾಗೂ ಊರ್ಜಯಂತಗಿರಿಗಳಿಂದ ಸಿದ್ಧಕ್ಷೇತ್ರದ ಜಿನ ಗಂಧೋದಕವನ್ನು ತರಿಸಿ ವಧೂವರರಿಗೆ ಧಾರೆಯೆರೆದರು ! ಹಸೆಯ ಮೇಲೆ ಗಂಡು ಹೆಣ್ಣುಗಳನ್ನುಕೂರಿಸಿದಾಗ ನೋಡುವುದಕ್ಕೆ ಎರಡು ಕಣ್ಣು ಸಾಲದಾಯಿತು. ನಾಗ ದೇವನ ಬಲಭಾಗದಲ್ಲಿ ಅತ್ತಿಮಬ್ಬೆಯೂ ಎಡಭಾಗದಲ್ಲಿ ಗುಂಡುಮಬ್ಬೆಯು ಕುಳಿತರು ! ನಾಗಕನ್ನೆಯರ ವೇಷದ್‌ಲ್ಲಿ ಹೆಮ್ಮಕ್ಕಳನ್ನು ಸಿಂಗರಿಸಿದ್ದರು. ಸೌಂದರ್ಯದ ಸಮತೋಲನವಾದಾಗ ನವರಸಗಳೂ ಉಕ್ಕದಿರವೆ? ರತ್ನತ್ರಯವೇ ಸಾಕಾರಗೊಂಡಂತೆ ಈ ದಂಪತಿಗಳು ರಾರಾಜಿಸಿದರು ! ಅಡಿಯಿಂದ ಮುಡಿತನಕ ಸಿಂಗರಗೊಂಡಿದ್ದ ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ಚಿಗುರೊಡೆದ ಜೋತಿರ್ಲತೆಗಳಂತೆ ನಿಗಿನಿಗಿಸಿದರು ! ನಾಗದೇವ ಒಂದು ಕಣ್ಣಿಂದ ಅತ್ತಿಮಬ್ಬೆ ಇನ್ನೊಂದು ಕಣ್ಣಿಂದ ಗುಂಡುಮಬ್ಬೆಯರನ್ನು ನೋಡಿಕೊಂಡು ಸಂಸಾರಸಾರೋದಯನಾಗಿ ವಿರಾಜಮಾನನಾಗಿದ್ದನು ! ಜ್ಯೋತಿರ್ಲತೆಗಳಂತಿರುವ ಈ ಹೆಮ್ಮಕ್ಕಳ ಮುಂದಿದ್ದ ದೀಪಸ್ತಂಭಗಳೆಲ್ಲ ಮಂಕಾಗಿ ಹೋದವು. ಪಂಪಕವಿ ಕಣ್ತುಂಬ ಈ ದಂಪತಿಗಳನ್ನು ನೋಡಿ ಪುಳಕಗೊಂಡು.

“ರಾಯರೆ, ಆದಿದೇವನಿಗೂ ಇಬ್ಬರು ಹೆಂಡತಿಯರು. ಈ ದಂಪತಿಗಳನ್ನು ನೋಡಿದರೆ ಯಶಸ್ವತಿ ಹಾಗು ಸುನಂದೆಯರ ನಡುವೆ ಆದಿದೇವ  ವಿರಾಜಿಸಿದಂತೆ ಕಾಣುತ್ತಿರುವುದು” ಎಂದು ಪಂಪ ಬೆರಗಾಗಿ ಚಾಮುಂಡರಾಯನೊಡನೆ ಹೇಳಿದನು.

“ಮಹಾಕವಿ, ಈ ದಂಪತಿಗಳನ್ನು ನೋಡಿದ ಮೇಲೇನೇ ತಾವು ಆದಿಪುರಾಣ ಬರೆಯಬೇಕಾಗಿತ್ತು. ಅಲ್ಲೂ ಅವಳಿಜವಳಿಗಳನ್ನು ಸಿಂಗರಿಸಬಹುದಾಗಿತ್ತು” ಎಂದು ಚಾಮುಂಡರಾಯ ಮುಗುಳ್ನಕ್ಕನು.

“ಇಂಥ ಜವಳಿಮಕ್ಕಳನ್ನು ಹೆತ್ತು ನೀನು ಭಾಗ್ಯಶಾಲಿಯಾದೆ!” ಎಂದು ದಲ್ಲಪನ ಹೆಂಡತಿ ಪದ್ಮಬ್ಬೆ ಆನಂದಾಶ್ರುವನ್ನು ಸುರಿಸುತ್ತ ಅಬ್ಬಕಬ್ಬೆಯೊಡನೆ ಹೇಳಿದಳು.

"ನನ್ನ ಭಾಗ್ಯ ಇಂದಿಗೆ ಮುಗಿಯಿತು. ನಿಮ್ಮ ಮಡಿಲಲ್ಲಿ ಹಾಕಲು ಈ ಬೆಳದಿಂಗಳ ರಾಸಿಯನ್ನು ನಾನು ಜೋಪಾನ ಮಾಡಿದ್ದೆ ತಾಯಿ. ಇದುವರೆವಿಗೂ ನಮ್ಮದಾಗಿತ್ತು. ಇನ್ನು ಈ ಸಂಪದವೆಲ್ಲ ತಮ್ಮದೇ!" ಎಂದು ಅಬ್ಬಕಬ್ಬೆ ಕಂಬನಿ ಮಿಡಿದಳು.

"ನಿಮಗೆ ಒಂದು ಬೇಕಾದರೂ ಕಳಿಸಿಕೊಡುವೆವು. ಯಾವ ಚಿಂತೆಯನ್ನೂ ಇಟ್ಟು ಕೊಳ್ಳಬೇಡಮ್ಮ. ನಿಮ್ಮ ಬೆಳದಿಂಗಳಿಗೆ ತಂಗಾಳಿಯನ್ನೂ ಬೀಸಿ ಬಡವಾಗದಂತೆ ನೋಡಿಕೊಳ್ಳುವೆವು. ನಮ್ಮ ಮನೆ ಬೆಳಗಾಲು ನಿಮ್ಮ ಮನೆಯ ಜೋಡಿ ಜ್ಯೋತಿಗಳನ್ನು ತೆಗೆದುಕೊಂಡು ಹೋಗುವೆವು. ಇವು ಎಂದು ನಂದದಂತೆ ನಮ್ಮ ಮನೆ ಬೆಳಗಲಿ ತಾಯಿ !" ಎಂದು ಪದ್ಮಬ್ಬೆ ಸಂತೃಪ್ತಿಯಿಂದ ನುಡಿದಳು.

"ಮಕ್ಕಳಿಲ್ಲದವರಿಗೆ ಇವೇ ಮಕ್ಕಳಾಗಿದ್ದವಮ್ಮ. ಇನ್ನು ಈ ಮನೆ ಬಿಕೋ ಎನ್ನಿಸುವುದು" ಎಂದು ಪುನ್ನಮಯ್ಯನ ಹೆಂಡತಿ ಕೌಸಲ್ಯಬ್ಬೆ ಸಂಕಟದಿಂದ ನುಡಿದಳು.

"ನಿಮಗೆ ಬೇಕಾದಾಗೆಲ್ಲ ನಮ್ಮಲ್ಲಿಗೆ ಬಂದು ಹೋಗಿ. ಸದಾ ನಿಮಗಾಗಿ ನಮ್ಮ ಬಾಗಿಲು ತೆರೆದಿರುವುದು" ಎಂದು ಪದ್ಮಬ್ಬೆ ಸಮಾಧಾನ ಮಾಡಿದಳು.

ಶ್ರೀಮಂತರ ವಿವಾಹ ಲಾಭದಾಯಕವಾದುದೇ. ಬಡವ ಏನು ಮಾಡಿದರೂ ತಲೆಯ ಮೇಲೆ ಕವಿಚಿಕೊಳ್ಳುವುದು. ಸಮುದ್ರದ ನಿರು ಹಬೆಯಾಗಿ ಮೇಘವಾಗಿ ಮಳೆಯಾಗಿ ಸುರಿದರೂ ಮತ್ತೆ ಅದು ಸಮುದ್ರಕ್ಕೇ ಹಿಂದಿರುಗಬೇಕಲ್ಲ. ಮಲ್ಲಪ ನೀರಿನಂತೆ ಹಣ ಖರ್ಚುಮಾಡಿದರೆ ವಧೂವರರ ಹೆಸರಿಗೆ ಬಹುಮಾನ ರೂಪದಲ್ಲಿ ರಾಜಮಹಾರಾಜರಿಂದ ಬಂಧುಮಿತ್ರರಿಂದ ಧನರಾಶಿ ಕೊಚ್ಚಿ ಬಂದಿತು.

ಈ ವಿವಾಹ ಮಹೋತ್ಸವದ ಅಂಗವಾಗಿ ಶಾಂತಿಪಾರಣದ ಪ್ರಕಾಶನವಾಯಿತು. ಶಾಂತಿನಾಥ ಹದಿನಾರನೇ ತೀರ್ಥಂಕರ ! ಶಾಂತಿನಾಥ ಐದನೆಯ ಚಕ್ರವರ್ತಿ ! ಮಿಗಿಲಾಗಿ ತನ್ನ ಕಾಲದ ನವಮನ್ಮಥ ! ಪಂಚಕಲ್ಯಾಣ ಮೂರ್ತಿಯಾದ ಈ ತೀರ್ಥೇಶ ಚರಿತವನ್ನು ಕನ್ನಡ ಪ್ರತಮ ಕವಿಚಕ್ರೇಶನಾದ ಪೊನ್ನಮಹಾಕವಿ ವಿರಚಿಸಿದನು! ಜಿನಚಂದ್ರರ ಸವಿನೆನಪಿಗಾಗಿ ಈ ಕೃತಿ ಜನ್ಮ

ತಾಳಿತು. ಮಲ್ಲಪ ಮತ್ತು ಪೊನ್ನ ಮಯ್ಯರ ಪ್ರಾರ್ಥನೆಯಂತೆ ಪೊನ್ನಕವಿ ಶಾಂತಿಪುರಾಣವನ್ನು ರಚಿಸಿದನು.

ಅತ್ತ ಇತ್ತ ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ನವಿಲ ನರ್ತಕಿಯರ ರೂಪಿನಲ್ಲಿ ಹಸೆಯಲ್ಲಿ ಕುಳಿತರು ! ಇವರ ನಡುವೆ ಕಾಮದೇವನಂತೆ ನಾಗದೇವ ಮಂಡಿಸಿದ್ದನು. ಹಸೆ ಮಂಟಪದ ಎರಡು ಪಕ್ಕದಲ್ಲೂ ಪಟಾವಳಿ ಕಬ್ಬಿನ ಜಲ್ಲೆಗಳು ಸೋಗೆಯನ್ನಾಡಿಸುತ್ತಾ ಮನ್ಮಥನ ಬಿಲ್ಲಿನಂತೆ ಕಂಗೊಳಿಸಿದವು. ಮೈಯೆಲ್ಲ ಮೊಗ್ಗಾಗಿದ್ದ ಮಲ್ಲಿಕಾ ಲತೆ ಹಸೆಯ ಮಂಟಪದ ಇಕ್ಕೆಲದಲ್ಲೂ ರಾರಾಜಿಸಿತು ! ಈ ಮೋಹಕ  ಸನ್ನಿವೇಶವನ್ನು ಕಣ್ತುಂಬ ನೋಡಲು ಸಹಸ್ರಾರು ಜನ ಬಂದಿದ್ದರು. ಈ ಮಧುಮಹೋತ್ಸವದ ಅಂಗವಾಗಿ ಪೊನ್ನಕವಿ ಶಾಂತೇಶ ಪುರಾಣವನ್ನು ಓದಿದನು. ಚಕ್ರವರ್ತಿಯ ಹಿರಿಮೆಯನ್ನು ಪಾಡಿದನು. ಮನ್ಮಥ ಗೀತವನ್ನು ಸುಶ್ರಾವ್ಯವಾಗಿ ಆಲಾಪನೆ ಮಾಡಿದನು. ವಧೂವರರು ಆನಂದದಲ್ಲಿ ತೇಲಿದರು.

ಶಾಂತಿನಾಥ ಕುರುಜಾಂಗಣದ ರಾಜಪುತ್ರ. ಇಕ್ಷ್ವಾಕುವಂಶದ ವಿಶ್ವಸೇನ ಮಹಾರಾಜನ ಪಟ್ಟದರಸಿಯಾದ ಐರಾದೇವಿ ಹದಿನಾರು ಶುಭಸ್ವಪ್ನಗಳನ್ನು ಕಂಡಬೇಲೆ ಗರ್ಭವತಿಯಾದಳು! ಅಶರೀರರಾಗಿ ದೇವತೆಗಳು ಐರಾದೇವಿಯ ಸುತ್ತ ಸೇರಿಕೊಂಡು ಸೇವೆಯೆಸಗಿದರು. ಅರಮನೆಯಲ್ಲಿ ದಿನವೂ ರತ್ನವೃಷ್ಟಿಯಾಯಿತು ! ನವಮಾಸ ಕಳೆದಮೇಲೆ ಐರಾದೇವಿಯ  ಗರ್ಭಾಂಬುಧಿಯಿಂದ ಶಾಂತಿನಾಥ ಭುವಿಗವತರಿಸಿದನು! ಈತನ ದರ್ಶನಕ್ಕಾಗಿ ದೇವತೆಗಳು ಭುವಿಗಿಳಿದು ಬಂದು ಜನ್ಮಾಭಿಷೇಕವನ್ನಾಚರಿಸಿದರು. ಮಗು ಬೆಳೆದು ದೊಡ್ಡದಾಯಿತು. ಸಹಸ್ರಾರು ಹೆಣ್ಣುಗಳು ನವಮನ್ಮಥನಾದ ಇವನನ್ನು ಮೋಹಿಸಿ ಬಂದರು ! ಶಾಂತಿನಾಥ ದಿಗ್ವಿಜಯವೆಸಗಿ ಆರುಖಂಡಗಳನ್ನೂ ಗೆದ್ದು ಬಂದನು. ವೃಷಭಾಚಲದಲ್ಲಿ ವೀರಶಾಸನವನ್ನು ಕೊರೆಸಲು ಹೋದಾಗ ಆ ಪರ್ವತದ ಅಡಿಯಿಂದ ಮುಡಿತನದ ಹಿಂದಾದ ಚಕ್ರವರ್ತಿಗಳ ಶಾಸನ ತುಂಬಿ ಹೋಗಿರುವುದನ್ನು ಕಂಡು ಶಾಂತಿನಾಥ ಬೆರಗಾದನು. ಯಾರೂ ಮಾಡದ್ದನ್ನು ನಾನೇನು ಮಾಡಿದೆ ಎಂದುಕೊಂಡು ತನ್ನ ಶಾಸನವನ್ನು ಕೊರೆಸದೆ ಶಾಂತಿನಾಥ ನಮ್ರನಾಗಿ ಹಿಂದಿರುಗಿದುದನ್ನು ಪೊನ್ನಕವಿ ಸೊಗಸಾಗಿ ವ್ಯಾಖ್ಯಾನ ಮಾಡಿದನು. ಶಾಂತಿನಾಥ ಚಕ್ರವರ್ತಿಯ ರಾಣೀವಾಸ ತೊಂಬತ್ತಾರು

ಸಹಸ್ರಮಂದಿ ಲೋಲಾಕ್ಷಿಯರ ಬೀಡು ! ಚತುದರ್ಶ ರತ್ನಗಳಿಗೆ ಶಾಂತಿನಾಥ ಅಧಿನಾಯಕನಾಗಿ ಷಟ್‌ಖಂಡಾಧಿ ಪತಿಯಾದ ಈ ಮಹಾನುಭಾವನಿಗೆ ಪುಣ್ಯೋದಯದಿಂದ ದಶವಿಧ ಭೋಗವೂ ಸಾಕು ಸಾಕು ಎನ್ನುವಷ್ಟು ಪ್ರಾಪ್ತಿಯಾದುದನ್ನು ಮಹಾಕವಿ ಕೇಳುಗರ ಮನ ಹಿಗ್ಗುವಂತೆ ಬಣ್ಣಿಸಿದನು. ಶೀತಲ ಮಹಾಸಾಗರದಲ್ಲೂ ಉಷ್ಣೋದಕ ಪ್ರವಾಹ ಹರಿಯುವಂತೆ ರಾಗ ರಸಿಕನಾದ ಶಾಂತಿನಾಥನ ಭೋಗ ಜೀವನದಲ್ಲಿ ಗುಪ್ತಗಾಮಿನಿಯಾಗಿ ವೀತರಾಗ ರಸಿಕತೆ ಅಡಗಿದ್ದುದನ್ನೂ ಪೊನ್ನಕವಿ ಮಾರ್ಮಿಕವಾಗಿ ಬಿತ್ತರಿಸಿದನು. ಒಮ್ಮೆ ಶಾಂತಿನಾಥ ಕನ್ನಡಿಯಲ್ಲಿ ಮುಖ ನೋಡಿಕೊಳ್ಳುವಾಗ ತನ್ನ ಜನ್ಮಜನ್ಮಾಂತರದ ಪ್ರಮುಖ ಘಟ್ಟಗಳೆಲ್ಲ ಒಂದಾದ ಮೇಲೊಂದರಂತೆ ಅಲೆ ಅಲೆಯಾಗಿ ಕಾಣಿಸಿದವು. ಕೊನೆಯಲ್ಲಿ ತನ್ನ ಬಾಳಿನ ಪರಮಧ್ಯೇಯವನ್ನೂ ಶಾಂತಿನಾಥ ಮನಗಂಡು ಸಂಸಾರಕ್ಕೆ ಕೊಕ್ಕರಿಸಿದ ಮಹಾದೃಶ್ಯವನ್ನು ಕೇಳುಗರಲ್ಲಿ ವೈರಾಗ್ಯ ಸಿಡಿದೇಳುವಂತೆ ಕುರುಳ್ಗಳ ಸವಣ ಬಣ್ಣಿಸಿದನು. ನವಮನ್ಮಥನಾದ ಶಾಂತಿನಾಥ ರಾಣಿವಾಸವನ್ನು ಕಡೆಗಣಿಸಿದನು; ಆರುಖಂಡದ ಅಧಿಪತಿಯಾದ ಶಾಂತಿನಾಥ ಅಪೂರ್ವ ರತ್ನಗಳೆಲ್ಲ ತನ್ನ ಪ್ರಯತ್ನಕ್ಕೆ ಕಂಟಕಗಳೆಂದು ನಿರ್ಧರಿಸಿದನು; ದಿವ್ಯ ಚಕ್ರವನ್ನು ತನ್ನ ಬಾಳ್ವೆಯಲ್ಲಿ ಕೋಲಾಹಲವೆಸಗಿದ ನಕ್ರವೆಂದು ನೂಕಿಬಿಟ್ಟನು ! ಎಲ್ಲವನ್ನೂ ತೊರೆದು ಎಲ್ಲರಿಂದಲೂ ದೂರವಾಗಿ ಶಾಂತಿನಾಥ ರಿಗಂಬರನಾದನು. ಬತ್ತಲೆಯಾಗಿ ತಪವೆಸಗಿ ಕೊನೆಗೆ ಶಾಂತಿನಾಥ ಕೇವಲಜ್ಞಾನವನ್ನು ಪಡೆದು ಜಿನೇಂದ್ರನಾದುದನ್ನು ವರಕವಿ ವಿವರಿಸಿದಾಗ ಕೇಳುಗರಲ್ಲಿ ಭಕ್ತಿಯ ತೆರೆ ಯೊರಳಿದಂತಾಯಿತು. ಪರಮಾತ್ಮನಾದ ಶಾಂತಿನಾಥನ ದಿವ್ಯಧ್ವನಿಯ ನವನೀತವನ್ನು ಪೊನ್ನಕವಿ ಮದುವೆಯ ಮಂಟಪದಲ್ಲೇ ಸಂತಸದಿಂದ ಹಂಚಿದನು ! ಕೇಳುಗರು ಕಿವಿಯರಳಿಸಿ ಮನವರಳಿಸಿ, ಅರ್ಧ ನಿಮೀಲಿತರಾಗಿ ಬ್ರಹ್ಮಾನಂದವನ್ನು ಸವಿದವರಂತೆ ಸಂತೃಪ್ತರಾದರು! ಮದುವೆ ಮಂಪಟವನ್ನು ಮರೆತು ತಾವೆಲ್ಲ ಸಮವಸರಣದಲ್ಲಿ ಶಾಂತಿಜಿನೇಂದ್ರನ ಭವ್ಯ ಸಾನ್ನಿಧ್ಯದಲ್ಲಿ ನೆರೆದಿರುವಂತೆ ಜನ ಭ್ರಾಂತರಾಗುವ ಮಟ್ಟಿಗೆ ಪೊನ್ನಕವಿ ಸಮವಸರಣದ ದಿವ್ಯದೃಶ್ಯವನ್ನು ವಿರಚಿಸಿದನು ! ಶಾಂತಿನಾಥ ಸಿದ್ಧನಾಗಿ ಪರಿಪೂರ್ಣವಾಗಿ ಸಿದ್ಧಶಿಲೆಯಲ್ಲಿ ಪರಂಜ್ಯೋತಿರೂಪನಾಗಿ ನಿರಾಕಾರನಾಗಿ ನಿರುಪಾಧಿಕ ಸುಖನಾಗಿ ರಾರಾಜಿಸಿದ್ದನ್ನು ಕೇಳಿದಾಗ

ಶ್ರಾವಕರೆಲ್ಲ ಸಿದ್ಧಶಿಲೆಯನ್ನು ಕಂಡವರಂತೆ, ಪರಮಾನಂದವನ್ನು ಉಂಡುವರೆಂತೆ ರೋಮಾಂಚನಗೊಂಡರು.

ಮದುವೆಗೆ ಬಂದಿದ್ಧ ಹೆಮ್ಮಕ್ಕಳಿಗೆ ಶಾಂತಿಪುರಾಣನ್ನು ಬಾಗಿನವಾಗಿ ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ಹಂಚಿದರು. ಕೇವಲ ನೂರು ಪ್ರತಿಗಳನ್ನು ಮಾತ್ರ ಮಾಡಿಸಿದ್ದರು. ಬಂದವರಲ್ಲಿ ಬಹು ಜನಕ್ಕೆ ಶಾಂತಿಪುರಾಣದ ಪ್ರತಿಗಳು ಲಭಿಸಲಿಲ್ಲ. ವಲ್ಲ ಎಂದು ಅತ್ತಿಮಬ್ಬೆ ಗುಂಡುಮಬ್ಬೆಯರು ಖಿನ್ನರಾದುದನ್ನು ಕಂಡು ಮಲ್ಲಪನ ಕರುಳು ನುಲುಚಿದಂತಾಗಿ ಮತ್ತೆ ಸಹಸ್ರ ಪ್ರತಿ ಮಾಡಿಸುವುದಾಗಿಯೂ ಎಲ್ಲರಿಗೂ ಅವರವರ ಮನೆಗೇ ಪ್ರತಿಗಳನ್ನು ಕಳುಹಿಸಿ ಕೊಡುವುದಾಗಿಯೂ ವಾಗ್ದಾನವಿತ್ತನು. ಇದನ್ನು ಕಂಡು ಪಂಪಕವಿ ಅತ್ತಿಮಬ್ಬೆಯನ್ನು ಮತ್ತು ಗುಂಡುಮಬ್ಬೆಯನ್ನು ಬುವಿಗವತರಿಸಿದ ಕನ್ನಡಾಂಬೆಯ ಕಣ್ಣುಗಳೆಂದು ಕೊಂಡಾಡಿದನು ! ತನ್ನ ಕೃತಿ ತನ್ನ ಕಣ್ಣೆದಿರೇ ಸಹಸ್ರ ಪ್ರತಿಯಾಗುವುದನ್ನು ಕೇಳಿ ಪೊನ್ನಕವಿ ಹಿಗ್ಗಿಹೋದನು !